ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 274(398)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಳಿಯಾರಿನ ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ದಾನಿಗಳಿಂದ ಸಾಕಷ್ಟು ಜಮೀನು ದಾನ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸ್ವಂತ ಕಟ್ಟಡದ ಕೊರತೆಯಿಂದಾಗಿ ಸರ್ಕಾರಿ ಕಾಲೇಜು ಮರದ ಕೆಳಗೆ ಪಾಠ ಪ್ರವಚನಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸರ್ಕಾರಿ ಕಾಲೇಜಿನ ಕಟ್ಟಡ ಕಟ್ಟಲು ಅಂದಾಜು ತಯಾರಿಸಲಾಗಿದೆಯೇ ಹಾಗೂ ಅದರ ಅಂದಾಜು ಎಷ್ಟು?

ಈ) 1995-96ನೇ ಸಾಲಿನಲ್ಲಿ 1/3 ಭಾಗ ಹಣವನ್ನು ಕಟ್ಟಡಕ್ಕೆ ಬಿಡುಗಡೆ ಮಾಡಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :-

ಅ) -- ಬಂದಿದೆ --

ಆ) -- ಬಂದಿಲ್ಲ --

ಇ) ಅಂದಾಜು ಇನ್ನೂ ತಯಾರಿಸಿಲ್ಲದ ಕಾರಣ ಅಂದಾಜು ಎಷ್ಟು ಎಂದು ಹೇಳಲು ಬರುವುದಿಲ್ಲ.

ಈ) 1995-96ನೇ ಸಾಲಿನಲ್ಲಿ ಆಯವ್ಯಯದ ಕೊರತೆಯಿಂದಾಗಿ ಹೊಸ ಕಾಮಗಾರಿಗಳಿಗೂ ಆಯವ್ಯಯ ಒದಗಿಸಲು ಸಾಧ್ಯವಾಗಿರುವುದಿಲ್ಲ.

ವಿಷಯ:- ಹುಳಿಯಾರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಎಕ್ಸ್‌ರೇ ಘಟಕದ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 275(397)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಳಿಯಾರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕ್ಷ - ಕಿರಣ ಘಟಕವು ಮಂಜೂರಾಗಿದ್ದು ಇದುವರೆವಿಗೂ ಘಟಕವನ್ನು ಕೊಳ್ಳಲು ಸಾಧ್ಯವಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಘಟಕವನ್ನು ಕೊಳ್ಳಲು ಸರ್ಕಾರದವರಿಗೆ ಇರುವ ತೊಂದರೆಗಳೇನು? ಹಾಗೂ ಯಾವಾಗ ಅದನ್ನು ಸ್ಥಾಪಿಸಲಾಗುವುದು.

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) -- ಬಂದಿದೆ --

ಆ) ಹುಳಿಯಾರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆರೋಗ್ಯ ಘಟಕ ಮಂಜೂರಾಗಿದ್ದರೂ ಕ್ಷ-ಕಿರಣ ಯಂತ್ರಕ್ಕೆ ದರಗುತ್ತಿಗೆ ಇಲ್ಲದ ಕಾರಣ, ಆ ಯಂತ್ರವನ್ನು ತುಮಕೂರು ಜಿಲ್ಲಾ ಪಂಚಾಯತ್‌ನವರು ಕೊಳ್ಳಲು ಸಾಧ್ಯವಾಗಲಿಲ್ಲ. ಕ್ಷ-ಕಿರಣ ಯಂತ್ರವನ್ನು ದರಗುತ್ತಿಗೆ ಸಂಸ್ಥೆಗಳಿಂದಲೇ ಜಿಲ್ಲಾ ಪರಿಷತ್ ಕೊಳ್ಳಬೇಕು. ಕ್ಷ-ಕಿರಣ ಯಂತ್ರಕ್ಕೆ ದರಗುತ್ತಿಗೆ ನಿಗದಿಪಡಿಸಲು ಸದ್ಯದಲ್ಲೇ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ:- ದಕ್ಷಿಣ ಕನ್ನಡ ಜಿಲ್ಲಾ ಉಪ್ಪಿನಂಗಡಿ ಹಾಗೂ ಪಾಣಾಜೆ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಯ ನೇಮಕ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 278(467)